**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ನ್ಯಾಯಾಲಯ, ಕಾರವಾರ**

ಸಿ.ಸಿ.ನಂಃ 1934/2025

ಡಿ. ಡಬ್ಲ್ಯೂಃ 01

| | |
|---|---|
| ಆರೋಪಿಯ ಹೆಸರು | ದಿವ್ಯಾ ಪ್ರಮೋದ್ ಗಾವಂಕರ್ |
| ಗಂಡನ ಹೆಸರು | ಪ್ರಮೋದ್ ಗಾವಂಕರ್ |
| ವಯಸ್ಸು | 50 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ್ತವ್ಯ | ಹಬ್ಬುವಾಡ , ಕಾರವಾರ |

(ಇಂದು ದಿನಾಂಕಃ 21-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಾದ ಶ್ರೀ ಜಿ ಎನ್ ಜೆ ರವರಿಂದಃ**

ನಾನು ಈ ಪ್ರಕರಣದಲ್ಲಿ ಆರೋಪಿಯಾಗಿರುತ್ತೇನೆ.

2. ನನ್ನ ಮದುವೆಯ ಮೊದಲು ನನ್ನ ಹೆಸರು ಜಯಶ್ರೀ ಶಂಭಾ ಸಾವಂತ ಅಂತಾ ಇತ್ತು. ಮದುವೆಯ ನಂತರ ನನ್ನ ಹೆಸರು ದಿವ್ಯಾ ಪ್ರಮೋದ್ ಗಾವಂಕರ್ ಎಂದು ಬದಲಾಗಿರುತ್ತದೆ. ಈ ಪ್ರಕರಣದ ಫಿರ್ಯಾದುದಾರರಾದ ಪ್ರಸಾದ ಕಾಮತ್ ರವರ ಪರಿಚಯ ನನಗೆ ಇದೆ.

3. ದಿನಾಂಕ 10-09-2022 ರಂದು ರೂ.8,00,000/-ಹಣವನ್ನು ಪ್ರಸಾದ ಕಾಮತ್ ರವರಿಂದ ತೆಗೆದುಕೊಂಡಿದ್ದೆ. ನಾನು ಸದ್ರಿ ಹಣವನ್ನು ತೆಗೆದುಕೊಳ್ಳುವಾಗ ಭದ್ರತೆಯ ಸಲುವಾಗಿ ನನ್ನ 2 ಚೆಕ್ಕುಗಳನ್ನು ಪ್ರಸಾದ್ ಕಾಮತ್ ರವರಿಗೆ ಕೊಟ್ಟಿದ್ದೆ. ನಾನು ಅವರಿಗೆ ಕೊಡಬೇಕಾದ ಎಲ್ಲಾ ಹಣವನ್ನು ವಾಪಾಸು ಕೊಟ್ಟಿದ್ದೆ. ದಿನಾಂಕ 09-03-2023 ರಂದು ರೂ. 1,00,000/-ಹಣವನ್ನು ಚೆಕ್ ಮೂಲಕ ವಾಪಾಸು ಕೊಟ್ಟಿದ್ದೆ. ದಿನಾಂಕ 19-05-2023 ರಂದು ರೂ. 1,00,000/-ಹಣವನ್ನು ನಾನು ಅವರಿಗೆ ನಗದಾಗಿ ಕೊಟ್ಟಿದ್ದೆ. ದಿನಾಂಕ 19-06-2023 ರಂದು ರೂ.6,80,000/- ಹಣವನ್ನು RTGS ಮೂಲಕ ಪ್ರಸಾದ್ ಕಾಮತ್ ರವರಿಗೆ ಕಳುಹಿಸಿದ್ದೆ. ನಾನು ಅವರಿಗೆ ಕೊಡಬೇಕಾದ ಎಲ್ಲಾ ಹಣವನ್ನು ಕೊಟ್ಟಿದ್ದರೂ ಸಹ ನಾನು ಅವರಿಗೆ ಕೊಟ್ಟ ಚೆಕ್ಕನ್ನು ಅವರು ವಾಪಾಸು ಕೊಟ್ಟಿಲ್ಲ. ಅದೇ ಚೆಕ್ಕನ್ನು ಉಪಯೋಗಿಸಿಕೊಂಡು ಪ್ರಸಾದ ಕಾಮತ್ ರವರು ನನಗೆ ತೊಂದರೆ ಕೊಡುತ್ತಿದ್ದಾರೆ. ನಾನು ಪ್ರಸಾದ

ಕಾಮತ್ ರವರಿಗೆ ರಿಪ್ಲಾಯ್ ಕೊಟ್ಟಿರುತ್ತೇನೆ. ನಾನು ಅವರಿಗೆ ಕೊಡಲು ಯಾವುದೇ ಹಣ ಬಾಕಿ ಇರುವುದಿಲ್ಲ. ಆದ್ದರಿಂದ ಅವರು ಸಲ್ಲಿಸಿರುವ ಈ ಫಿರ್ಯಾದನ್ನು ವಜಾ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ .

4. ಸಾಕ್ಷಿ ಹಾಜರುಪಡಿಸಿರುವ ಶಾಲಾ ವರ್ಗಾವಣಾ ಪ್ರಮಾಣ ಪತ್ರವನ್ನು **ನಿಡಿ-3** ಅಂತಾ ಗುರುತಿಸಲಾಯಿತು.ಸಾಕ್ಷಿ ಹಾಜರುಪಡಿಸಿರುವ ವಿವಾಹ ಪ್ರಮಾಣ ಪತ್ರವನ್ನು **ನಿಡಿ-4** ಅಂತಾ ಗುರುತಿಸಲಾಯಿತು.ಸಾಕ್ಷಿ ಹಾಜರುಪಡಿಸಿರುವ ಆಧಾರ ಕಾರ್ಡ್ ನ್ನು **ನಿಡಿ-5** ಅಂತಾ ಗುರುತಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಾದ ಶ್ರೀ ಎಂ ಬಿ ಎನ್ ರವರಿಂದಃ**

ಈ ಹಂತದಲ್ಲಿ ಪಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು ಸಮಯಾವಕಾಶ ನೀಡಿ ಮುಂದೂಡಲಾಗಿದೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಕಾರವಾರ**